2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಕನಕಪುರ

ಸಿ.ಸಿ ನಂಃ 453 /2011

- - - - - - - - - - - - - - - - - - - - - - - - - - - -

- ಪಿಡಬ್ಲ್ಯೂ-1
-

ದಿಃ 29.03.2016ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ ಎಪಿಪಿ ರವರಿಂದಃ-

ದಿ. 25-8-2010ರಂದು ನಮ್ಮ ಮನೆ ಮುಂದುಗಡೆ ಸಂಜೆ 6ಗಂಟೆ ಸಮಯದಲ್ಲಿ ಆರೋಪಿಗಳು ಹಾಗೂ ಇತರರು ಬಂದು ಗಲಾಟೆ ಮಾಡಿದರು. ಆರೋಪಿ-4 ದೊಣ್ಣೆಯಿಂದ ಚಾಸಾ-2ರವರ ಎಡ ಕೈ ಬಲ ಕಾಲು ಮೂಳೆ ಮುರಿಯುವಂತೆ ಹೊಡೆದರು. ನಂತರ ದೊಣ್ಣೆಯಿಂದ ಅವರ ಮೈಕೈ ಮೇಲೆ ಹೊಡೆದರು. ಆರೋಪಿಗಳು ಏಕಾಏಕಿ ಚಾಸಾ-2ರವರಿಗೆ ಕೈಕಾಲುಗಳಿಂದ ಗುದ್ದಿ ಹೊಡೆದರು. ಚಾಸಾ-3ರವರಿಗೆ ಆರೋಪಿ ರಾಮಬಸವ ಹಾಗೂ 1ನೇ ಆರೋಪಿ ರೀಪೀಸ್ ಪಟ್ಟಿಯಿಂದ ತಲೆಗೆ ಹೊಡೆದರು ಹೊಡೆತಕ್ಕೆ ಚಾಸಾ-3ರವರ ಹಣೆ ಸೀಳಿ ರಕ್ತಗಾಯ ಉಂಟಾಯಿತು. ಉಳಿದ ಆರೋಪಿಗಳು ಚಾಸಾ-3ರವರಿಗೆ ದೊಣ್ಣೆ ಹಾಗೂ ಕೈಗಳಿಂದ ಕೈಕಾಲು, ಬೆನ್ನು ಬಲತೋಳಿಗೆ ಹಾಗೂ ಮೈಮೇಲೆಲ್ಲಾ ಹೊಡೆದರು. ಚಾಸಾ-5ರವರು ಕೇಳಲು ಬಂದಾಗ ಆರೋಪಿಗಳು ಬೋಳಿಮಗನೆ ನಿನಗೂ ಒಂದು ಗತಿ ಕಾಣಿಸುತ್ತೇನೆ. ಎಂದು ಹೇಳಿ ಆರೋಪಿ-1 ದೊಣ್ಣೆಯಿಂದ ಎಡಕೈ ಮೂಳೆ ಮುರಿಯುವಂತೆ, ಆರೋಪಿ-4 ರಾಡಿನಿಂದ ಮೈಕೈ ಮೇಲೆ, ಆರೋಪಿ-5ರವರು ಮಚ್ಚಿನಿಂದ ತಲೆ ಮುಂಭಾಗಕ್ಕೆ ಸೀಳುವಂತೆ ಹೊಡೆದು ರಕ್ತಗಾಯ

ಪಡಿಸಿದರು.  ಉಳಿದ ಆರೋಪಿಗಳು ದೊಣ್ಣೆ ಮಚ್ಚು, ರಾಡುಗಳಿಂದ ಚಾಸಾ-5ರವರಿಗೆ ಹೊಡೆದರು ನೋವುಂಟು ಮಾಡಿದರು. ಅಲ್ಲಿಗೆ ಬಂದ ಚಾಸಾ-4ರವರಿಗೆ ಆರೋಪಿ-5 ಮತ್ತು ರಾಮ ಬಸವ ಕಾಲುಗಳಿಂದ ಹೊದ್ದು ಕೈಗಳಿಂದ ಹೊಡೆದು ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಕಿತ್ತುಕೊಂಡರು. ಅಷ್ಟರಲ್ಲಿ ನಾನು, ಬಂದಾಗ ಆರೋಪಿ- ಗಿರೀಶ್ ಕಲ್ಲಿನಿಂದ ನನ್ನ ಮೂಗು ಬಾಯಿಗೆ  ಮತ್ತು ಹಲ್ಲಿಗೆ ಹೊಡೆದಿದ್ದು, ನನ್ನ ಮುಂದಿನ ಹಲ್ಲು ಸ್ವಲ್ಪ ಭಾಗ ಕಿತ್ತು ಹೋಗಿ ರಕ್ತ ಬಂದಿರುತ್ತದೆ. ಆರೋಪಿ-1 ಮತ್ತು 2 ನಮ್ಮ ಮನೆಯ ಬೀರುವಿನ ಬಾಗಿಲನ್ನು ತೆಗೆದಿದ್ದು ಉಳಿದ ಆರೋಪಿಗಳು ಬೀರುವಿನಲ್ಲಿದ್ದ 500ಗ್ರಾ ಚಿನ್ನದ ಒಡವೆಗಳನ್ನು ಮತ್ತು 1ಲಕ್ಷ ರೂ. ನಗದನ್ನು ದೋಚಿದರು.  ಆರೋಪಿಗಳು ಮಚ್ಚಿನಿಂದ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿದರು. ಸಾಕ್ಷಿ ನ್ಯಾಯಲಯ ಮುಂದಿರುವ 2ದೊಣ್ಣೆಗಳು, 2 ರೀಪೀಸ್ ಪಟ್ಟಿಗಳು, 1 ಕಬ್ಬಿಣದ ಮಚ್ಚು, ಕಬ್ಬಿನದ ರಾಡು ಹಾಗೂ ಕಲ್ಲನಿಂದ ಆರೋಪಿಗಳು ನನಗೆ ಚಾಸಾ-2ರಿಂದ 5ರವರಿಗೆ ಹೊಡೆದಿರುತ್ತಾರೆ ಎಂದು ಗುರ್ತಿಸಿರುತ್ತಾರೆ. ದೊಣ್ಣೆಗಳನ್ನು ಎಂಓ-1 ಮತ್ತು 2 , ರೀಪೀಸ್‌ಪಟ್ಟಿಗಳನ್ನು ಎಂಓ-3, 4 ಮಚ್ಚನ್ನು ಎಂಓ- 5, ರಾಡನ್ನು ಎಂಓ-6, ಹಾಗೂ ಕಲ್ಲನ್ನು ಎಂಓ-7 ಎಂದು ಗುರ್ತಿಸಲಾಯಿತು.

ಪಾಟೀ ಸವಾಲು ಸಮಯಕೋರಿದ್ದು ನೀಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ